# <u>ಕರ್ನಾಟಕ ಲೋಕಾಯುಕ್ತ</u>

<u>ಸಂಖ್ಯೆ:</u> ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್.,–9674/2018/ಡಿ.ಆರ್.ಇ–2　ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 27/08/2019

## <u>ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ</u>

ವಿಷಯ: ಶ್ರೀ ಡೇವಿಡ್ ಪ್ರಕಾಶ್ ಡಿಸೋಜ್ಞ್ ಅವರು ಮೂಡಬಿದ್ರೆ ಪುರಸಭಾ ವ್ಯಾಪ್ತಿಯ ಪ್ರಾಂತ್ಯ ಗ್ರಾಮದ ಸರ್ವೆ ನಂ. 219/ಪಿ14 ರಲ್ಲಿನ 0.25 ಎಕರೆ ಸ್ಥಳದಲ್ಲಿರುವ ಜೋ–ಹೈಟ್ಸ್ ವಸತಿ ಗೃಹ ರಚನೆಗೆ ತಮ್ಮ ಕಛೇರಿಯಿಂದ ಪರವಾನಗಿ ಪಡೆದು ಸಭಾ ಭವನ ಕಟ್ಟಿ ಅಕ್ಕಪಕ್ಕದ ಜನರಿಗೆ ಶಬ್ದ ಮಾಲಿನ್ಯ ಹಾಗೂ ಸಭಾ ಭವನಕ್ಕೆ ಬರುವವರು ಪಾರ್ಕಿಂಗ್ ಅಕ್ಕಪಕ್ಕದ ಮನೆಯವರ ಮುಂದೆ ಮಾಡಿ ನೀಡುತ್ತಿರುವ ತೊಂದರೆಯನ್ನು ತ್ವರಿತವಾಗಿ ಸರಿಪಡಿಸಲು ಸೂಕ್ತ ಕ್ರಮ ಜರುಗಿಸುವುದರ ನಡವಳಿಕೆ ಕುರಿತು ವರದಿ.

*****

ಶ್ರೀಮತಿ ಸ್ನೇಹಲತಾ ಎ. ಅಜ್ರಿ ಕೋ ಪಾರ್ಶ್ವನಾಥ ಅಜ್ರಿ, ''ಶ್ರಾವಣ'' ವಿವೇಕಾನಂದ ನಗರ ಮಾಸ್ತಿ ಕಟ್ಟೆ, ಪ್ರಾಂತ್ಯ ಗ್ರಾಮ, ಮೂಡಬಿದ್ರೆ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, (1) ಶ್ರೀ ಶೀನ ನಾಯ್ಕ.ಬಿ, ಮುಖ್ಯಾಧಿಕಾರಿ, ಪುರಸಭೆ, ಮೂಡುಬಿದರೆ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ, ಹಾಲಿ ನಿವೃತ್ತಿ, (2) ಶ್ರೀಮತಿ ಶಿಲ್ಪಾ.ಎಸ್, ಪರಿಸರ ಅಭಿಯಂತರರು, ಪುರಸಭೆ, ಮೂಡುಬಿದರೆ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ, (3) ಶ್ರೀ ಮಂಜುನಾಥ್, ಆರೋಗ್ಯಾಧಿಕಾರಿ, ಪುರಸಭೆ, ಮೂಡುಬಿದರೆ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ, (4) ಶ್ರೀ ಧನಂಜಯ ಡಿ.ಬಿ., ಕಂದಾಯ ಅಧಿಕಾರಿ, ಪುರಸಭೆ, ಮೂಡುಬಿದರೆ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಮತ್ತು, (5) ಶ್ರೀ ಡೇವಿಡ್ ಪ್ರಕಾಶ್ ಡಿಸೋಜ್ಞ್, ನಾಮೆದಾರರಾದ ವಲೇರಿಯನ್ ಅಶೋಕ್ ನಜರತ್, ಬಿನ್ ಬೋನವೆಂಚರ್ ನಜರೆತ್, ಗಾಂಧಿನಗರ, ಮರಪಾಡಿ ಗ್ರಾಮ, ಮೂಡಬಿದ್ರೆ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ (ಇನ್ನು ಮುಂದೆ '1 ರಿಂದ 5ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ದ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ

ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ: ದೂರುದಾರರು ಜೋಹೈಟ್ಸ್ ಸಭಾ ವಾಡಿಕೆ ನೀಡಿರುವ ಪರವಾನಗಿಯನ್ನು ರದ್ದುಪಡಿಸುವಂತೆ ಆಕ್ಷೇಪಣಾ ಪತ್ರವನ್ನು ಎದುರುದಾರರಿಗೆ ನೀಡುತ್ತಾ ಬಂದಿದ್ದು, ಸದರಿ ಕಟ್ಟಡದ ಮಾಲೀಕರು ಮೊದಲಿಗೆ ವಸತಿ ಸಮುಚ್ಛಯಕ್ಕೆ ಪರವಾನಗಿ ಪಡೆದು ನಿರಂತರ ನೆಲಮಹಡಿಯಲ್ಲಿ ಸಭಾ ಭವನವನ್ನು ನಿರ್ಮಿಸಿರುತ್ತಾರೆ. ಈ ವಸತಿ ಸಮುಚ್ಛಯವು ತಮ್ಮ ಮನೆಗಳಿಗೆ ತಾಗಿರುವುದರಿಂದ ಇದೇ ವಸತಿ ಪ್ರದೇಶದಲ್ಲಿ ವಾಸಿಸುತ್ತಿರುವ ತಮಗೆ ಸಭಾ ಭವನದ ಗದ್ದಲದಿಂದ ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ತುಂಬಾ ತೊಂದರೆಯಾಗುತ್ತಿದೆ, ಸಭಾ ಭವನಕ್ಕೆ ಸರಿಯಾದ ವಾಹನ ನಿಲುಗಡೆ ವ್ಯವಸ್ಥೆ ಇಲ್ಲದೇ ತಮ್ಮ ಮನೆಗಳ ಮುಂದೆ ಪಾರ್ಕಿಂಗ್ ಮಾಡುವುದರಿಂದ ತಮಗೆ ತೊಂದರೆಯಾಗುತ್ತಿದೆ, ಇದರಿಂದ ತಮಗೆ ಮಾನಸಿಕ ಕಿರುಕುಳ ಉಂಟಾಗುತ್ತಿದೆ. ಸಭಾ ಭವನ ನಿರ್ಮಾಣದ ಹಂತದಿಂದಲೂ ತಾವು ಆಕ್ಷೇಪಣೆ ನೀಡುತ್ತಾ ಬಂದರೂ ಸಹಿತ ಅದನ್ನು ವಿಮರ್ಶೆ ಮಾಡದೇ ಪರವಾನಗಿ ನೀಡಿರುತ್ತಾರೆ. ಸದರಿ ಸಭಾ ಭವನ ಪ್ರ್ಯಾಂತ್ ಗ್ರಾಮದ ಸರ್ವೆ ನಂ. 219/ಪಿ14ರಲ್ಲಿ 0.25 ಎಕರೆ ಸ್ಥಳದಲ್ಲಿ ವಾಸ್ತವ್ಯದ ಉದ್ದೇಶಕ್ಕಾಗಿ ನಿಬಂಧನೆ 11ರಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿದ್ದರೂ ಸಹಿತ ಅದನ್ನು ಪರಿಗಣಿಸದೇ ಸಭಾ ಭವನ ಪ್ರಾರಂಭಿಸಿ ಮದುವೆ ಮುಂತಾ ಸಮಾರಂಭವನ್ನು ನಡೆಸಿ ಪರಿಸರ ಮಾಲಿನ್ಯ, ಶಬ್ದ ಮಾಲಿನ್ಯ, ಜಲ ಮಾಲಿನ್ಯ ಮಾಡುತ್ತಿದ್ದಾರೆ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕಾಗಿ ಕೋರಿದ್ದಾರೆ.

3. 1, 2 ಹಾಗೂ 4ನೇ ಎದುರುದಾರರು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿ, ಅದರಲ್ಲಿ ಕಟ್ಟಡದ ಮಾಲೀಕರಿಗೆ ಮತ್ತು ದೂರುದಾರರಿಗೆ ದಿನಾಂಕ: 23/08/2018 ರಂದು ಮುಖ್ಯಾಧಿಕಾರಿ ಕೋರ್ಟ್‌ನಲ್ಲಿ ಹಾಜರಾಗುವಂತೆ ಸೂಚನಾ ಪತ್ರ ನೀಡಲಾಗಿತ್ತು. ಕಟ್ಟಡದ ಮಾಲೀಕರ ಪರ ಸಾಮಾನ್ಯ ಅಧಿಕಾರ ಪತ್ರದಾರ ಶ್ರೀ ಅಶೋಕ್ ನಜ್ಹರ್ ಹಾಜರಿದ್ದು, ಕಛೇರಿ ಸಿಬ್ಬಂದಿಗಳ ಸಮಕ್ಷಮ್ಮ ದಿನಾಂಕ: 23/05/2018 ರಂದು ವಿಚಾರಣೆ ನಡೆಸಿ ಅಂತಿಮ ನೋಟಿಸ್‌ನ್ನು ಶ್ರೀ ಡೇವಿಡ್ ಪ್ರಕಾಶ್ ಡಿಸೋಜ಼್ ಅವರಿಗೆ ನೀಡಲಾಗಿದೆ. ಆದರೆ, ದೂರುದಾರರು ವಿಚಾರಣೆಗೆ ಹಾಜರಾಗಿಲ್ಲ. ಕಟ್ಟಡದ ಮಾಲೀಕರು ಪುರಸಭೆ ನೀಡಿರುವ ಆದೇಶಕ್ಕೆ ವಿರುದ್ಧವಾಗಿ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ರಿಟ್

ಅರ್ಜಿ ಸಂಖ್ಯೆ: 30974/2018 (ಎಲ್.ಬಿ.–ಆರ್.ಇ.ಎಸ್.) ನ್ನು ದಾಖಲಿಸಿರುತ್ತಾರೆ. ಸದರಿ ಅರ್ಜಿಯ ನೋಟಿಸ್ ತಮಗೆ ಬಂದಿದ್ದು, ಪುರಸಭೆ ವಕೀಲರ ಮೂಲಕ ಕಾನೂನು ಪ್ರಕ್ರಿಯೆ ನೀಡಲಾಗಿದೆ. ದೂರುದಾರರ ವ್ಯಾಜ್ಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಪ್ರಕರಣ ಇರುವುದರಿಂದ ದೂರುದಾರರ ದೂರನ್ನು ಮುಕ್ತಾಯ ಮಾಡಬೇಕೆಂದು ಕೋರಿದ್ದಾರೆ. ಅಲ್ಲದೇ, ಅಗತ್ಯ ದಾಖಲೆಗಳನ್ನು ಹಾಜರುಪಡಿಸಿದ್ದಾರೆ.

4. 1ನೇ ಎದುರುದಾರರು ತಮ್ಮ ಕಛೇರಿಯಲ್ಲಿ ಆರೋಗ್ಯಾಧಿಕಾರಿಗಳು ಯಾರು ಕರ್ತವ್ಯ ನಿರ್ವಹಿಸುತ್ತಿಲ್ಲವೆಂದು ದಿನಾಂಕ: 19/01/2019 ರಂದು ಪತ್ರದ ಮೂಲಕ ತಿಳಿಸಿದ್ದಾರೆ.

5. 1, 2 ಮತ್ತು 4ನೇ ಎದುರುದಾರರು ಹಾಜರುಪಡಿಸಿರುವ ಎಲ್ಲಾ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ್ದೇನೆ. ದಿನಾಂಕ: 24/05/2018ರ 1ನೇ ಎದುರುದಾರರು ಶ್ರೀ ಡೇವಿಡ್ ಪ್ರಕಾಶ್ ಡಿಸೋಜ಼್ ಇವರಿಗೆ ನೀಡಿದ ಅಂತಿಮ ನೋಟಿಸ್‌ನ್ನು ಪರಿಶೀಲಿಸಲಾಗಿ, ಶ್ರೀ ಡೇವಿಡ್ ಪ್ರಕಾಶ್ ಡಿಸೋಜ಼್ ಅವರು ಮೂಡಬಿದ್ರೆ ಪುರಸಭಾ ವ್ಯಾಪ್ತಿಯ ಪ್ರಾಂತ್ಯ ಗ್ರಾಮದ ಸರ್ವೆ ನಂ. 219/ಪಿ14 ರಲ್ಲಿನ 0.25 ಎಕರೆ ಸ್ಥಳದಲ್ಲಿರುವ ಜೋ–ಹೈಟ್ಸ್ ವಸತಿ ಗೃಹ ರಚನೆಗೆ ತಮ್ಮ ಕಛೇರಿಯಿಂದ ಪರವಾನಗಿ ಮಂಜೂರು ಮಾಡಲಾಗಿತ್ತು. ಆದರೆ, ನೀವು ಅನುಮೋದಿತ ನಕ್ಷೆಗೆ ವ್ಯತಿರಿಕ್ತವಾಗಿ ಸಭಾ ಭವನ ನಿರ್ಮಾಣ ಮಾಡಿಕೊಂಡು ಪುರಸಭಾ ಕಾನೂನನ್ನು ಸ್ಪಷ್ಟ ಉಲ್ಲಂಘನೆ ಮಾಡಿದ್ದೀರಿ. ಇದರಿಂದ ಅಕ್ಕಪಕ್ಕದ ಪರಿಸರದ ನಾಗರೀಕರಿಗೆ ಶಬ್ದ ಮಾಲಿನ್ಯ ಹಾಗೂ ವಾಹನ ಪಾರ್ಕಿಂಗ್‌ನಿಂದ ಅಡಚಣೆ ಉಂಟಾಗುತ್ತಿದೆಯೆಂದು ಲೋಕಾಯುಕ್ತದಲ್ಲಿ ದೂರು ಸಲ್ಲಿಸಿದ್ದಾರೆ. ಆದ್ದರಿಂದ, ಅನಧಿಕೃತವಾಗಿ ರಚಿಸಿಕೊಂಡು ಸಭಾ ಭವನದಲ್ಲಿ ಯಾವುದೇ ಕಾರ್ಯಕ್ರಮ ಮಾಡತಕ್ಕದಲ್ಲ ಎಂಬ ಬಗ್ಗೆ ಹಾಗೂ ಈ ಬಗ್ಗೆ ಪುನ: ದೂರು ಬಂದರೆ ಕಾನೂನು ರೀತ್ಯಾ ಕ್ರಮ ವಹಿಸಲಾಗುವುದು ಎಂದು ಉಲ್ಲೇಖಿಸಿದ್ದಾರೆ.

6. ಎದುರುದಾರರು ಹಾಜರುಪಡಿಸಿರುವ ದಾಖಲೆಗಳಿಂದ, ಮೂಡಬಿದ್ರೆ ಪುರಸಭಾ ವ್ಯಾಪ್ತಿಯ ಪ್ರಾಂತ್ಯ ಗ್ರಾಮದ ಸರ್ವೆ ನಂ. 219/ಪಿ14 ರಲ್ಲಿನ 0.25 ಎಕರೆ ಸ್ಥಳದಲ್ಲಿರುವ ಜೋ–ಹೈಟ್ಸ್ ಹೆಸರಿನ ಸಭಾ ಭವನ ನಿರ್ಮಾಣ ಮಾಡಿ ಪುರಸಭೆಯ ಕಾನೂನನ್ನು ಸ್ಪಷ್ಟವಾಗಿ ಉಲ್ಲಂಘಿಸಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಎದುರುದಾರರು ಶ್ರೀ ಡೇವಿಡ್ ಪ್ರಕಾಶ್ ಡಿಸೋಜ಼್ ರವರು ಮಾನ್ಯ ಕರ್ನಾಟಕ

ಉಚ್ಛ ನ್ಯಾಯಾಲಯದಲ್ಲಿ ಡಬ್ಲ್ಯೂ.ಪಿ. ನಂ. 30974/2018 (ಎಲ್.ಬಿ.–ಆರ್.ಇ.ಎಸ್) ನೇದ್ದನ್ನು ಸಲ್ಲಿಸಿದ್ದಾರೆ. ಅದರಲ್ಲಿ, ತಮಗೆ ನೋಟಿಸ್ ಬಂದಿದ್ದು, ಪುರಸಭೆ ವಕೀಲರ ಮೂಲಕ ಕಾನೂನು ಕ್ರಮ ಜರುಗಿಸುವುದಾಗಿ ತಿಳಿಸಿದ್ದರು ಮತ್ತು ದೂರನ್ನು ಮುಕ್ತಾಯ ಮಾಡಬೇಕೆಂದು ಕೋರಿದ್ದರು.

7. ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ ಅಂತರ್ಜಾಲದ ಮೂಲಕ ಶ್ರೀ ಡೇವಿಡ್ ಪ್ರಕಾಶ್ ಡಿಸೋಜ಼್ ರವರು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಸಲ್ಲಿಸಿರುವ ಡಬ್ಲ್ಯೂ.ಪಿ. ನಂ. 30974/2018 (ಎಲ್.ಬಿ.–ಆರ್.ಇ.ಎಸ್) ನೇದ್ದರ ವಸ್ತು ಸ್ಥಿತಿಯನ್ನು ಮತ್ತು ಅದು ಯಾವ ಹಂತದಲ್ಲಿ ಇದೆಯೆಂದು ಪರಿಶೀಲಿಸಿದಾಗ, ದಿನಾಂಕ: 02/11/2018 ರಂದು ಸದರಿ ಡಬ್ಲ್ಯೂ.ಪಿ. ನಂ. 30974/2018 (ಎಲ್.ಬಿ.–ಆರ್.ಇ.ಎಸ್) ನೇದ್ದನ್ನು ಮುಕ್ತಾಯಗೊಳಿಸಲಾಗಿದೆ ಎಂದು ಕಂಡುಬರುತ್ತದೆ.

8. ಶ್ರೀ ಡೇವಿಡ್ ಪ್ರಕಾಶ್ ಡಿಸೋಜ಼್ ರವರು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಸಲ್ಲಿಸಿರುವ ಡಬ್ಲ್ಯೂ.ಪಿ. ನಂ. 30974/2018 (ಎಲ್.ಬಿ.–ಆರ್.ಇ.ಎಸ್) ನೇದ್ದರ ಖಂಡಿಕೆ 3 ರಿಂದ 5ನ್ನು ಈ ಕೆಳಗೆ ಉಲ್ಲೇಖ ಪಡಿಸುವುದು ಸೂಕ್ತವಾಗುತ್ತದೆಂದು ಅಭಿಪ್ರಾಯ ಪಟ್ಟು ಕೆಳಗೆ ಉಲ್ಲೇಖಿಸಲಾಗಿದೆ.

> In the interregnum, respondent No. 2 contends that Annexure-A is a notice issued to the petitioner and if he submits a reply, the same will be considered in accordance with law.
>
> In view of the same, I am of the considered view that the petitioner be granted liberty to reply to Annexure-A, which shall be done within a period of two weeks from today.
>
> On submission of the reply, respondent No. 2 shall consider the same in accordance with law and pass appropriate orders within a period of four weeks thereafter.
>
> Petition is disposed off accordingly.

9. ಎದುರುದಾರರು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ತಮ್ಮ ವಕೀಲರ ಮೂಲಕ ಸದರಿ ರಿಟ್ ಅರ್ಜಿಯಲ್ಲಿ ಕಾನೂನು ಪ್ರಕ್ರಿಯೆ ನಡೆಸುವುದಾಗಿ ಹೇಳಿಕೊಂಡಿದ್ದರು, ಆದರೆ ಸದರಿ ರಿಟ್ ಅರ್ಜಿಯನ್ನು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ 02/11/2018 ರಂದು ಮುಕ್ತಾಯಗೊಳಿಸಿರುವುದರಿಂದ, ದೂರುದಾರರು ಹಾಜರುಪಡಿಸಿರುವ ದಿನಾಂಕ: 24/05/2018ರ ನೋಟಿಸ್‌ನಲ್ಲಿ ಉಲ್ಲೇಖಿಸಿದಂತೆ ವಸತಿ ಉದ್ದೇಶಕ್ಕಾಗಿ ಅನುಮತಿ ಪಡೆದು ಸಭಾ ಭವನ ಕಟ್ಟಿ ಮದುವೆ ಮತ್ತು ಇತರೆ ಸಮಾರಂಭಗಳಿಗೆ ನೀಡಿ ಶಬ್ದ ಮಾಲಿನ್ಯ ಹಾಗೂ ಪರಿಸರದ ಜನರಿಗೆ ಪಾರ್ಕಿಂಗ್‌ನಿಂದ ಆಗುವ ತೊಂದರೆಯನ್ನು ನಿವಾರಿಸುವಂತೆ ಸೂಕ್ತ ಕ್ರಮವನ್ನು ಎದುರುದಾರರು ಜರುಗಿಸುವುದು ಅತ್ಯಗತ್ಯವಾಗಿದೆ.

10. ಎದುರುದಾರರು ಶ್ರೀ ಡೇವಿಡ್ ಪ್ರಕಾಶ್ ಡಿಸೋಜ಼್ ರವರು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಡಬ್ಲ್ಯೂ.ಪಿ. ನಂ. 30974/2018 (ಎಲ್.ಬಿ.–ಆರ್.ಇ.ಎಸ್) ನೇದ್ದನ್ನು ಸಲ್ಲಿಸಿದ್ದಾರೆ. ಅದರಲ್ಲಿ, ತಮಗೆ ನೋಟಿಸ್ ಬಂದಿದ್ದು, ಪುರಸಭೆ ವಕೀಲರ ಮೂಲಕ ಕಾನೂನು ಕ್ರಮ ಜರುಗಿಸುವುದಾಗಿ ತಿಳಿಸಿದ್ದರು ಮತ್ತು ದೂರನ್ನು ಮುಕ್ತಾಯ ಮಾಡಬೇಕೆಂದು ಕೋರಿದ್ದರು. ಆದರೆ ಈಗಾಗಲೇ ಸದರಿ ಡಬ್ಲ್ಯೂ.ಪಿ. ನಂ. 30974/2018 (ಎಲ್.ಬಿ.–ಆರ್.ಇ.ಎಸ್) ದಿನಾಂಕ: 02/11/2018 ರಲ್ಲಿ ಮುಕ್ತಾಯಗೊಂಡಿದ್ದರೂ ಸಹಿತ, ಎದುರುದಾರರು ಯಾವುದೇ ಕ್ರಮ ಜರುಗಿಸದೇ ಇರುವುದನ್ನು ನೋಡಲಾಗಿ, ಎದುರುದಾರರು ಕರ್ತವ್ಯ ಲೋಪ ಎಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

11. ಆದ್ದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, ಶ್ರೀ ಡೇವಿಡ್ ಪ್ರಕಾಶ್ ಡಿಸೋಜ಼್ ಅವರು ಮೂಡಬಿದ್ರೆ ಪುರಸಭಾ ವ್ಯಾಪ್ತಿಯ ಪ್ರಾಂತ್ಯ ಗ್ರಾಮದ ಸರ್ವೆ ನಂ. 219/ಪಿ14 ರಲ್ಲಿನ 0.25 ಎಕರೆ ಸ್ಥಳದಲ್ಲಿರುವ ಜೋ–ಹೈಟ್ಸ್ ವಸತಿ ಗೃಹ ರಚನೆಗೆ ತಮ್ಮ ಕಛೇರಿಯಿಂದ ಪರವಾನಗಿ ಪಡೆದು ಸಭಾ ಭವನ ಕಟ್ಟಿ ಅಕ್ಕಪಕ್ಕದ ಜನರಿಗೆ ಶಬ್ದ ಮಾಲಿನ್ಯ ಹಾಗೂ ಸಭಾ ಭವನಕ್ಕೆ ಬರುವವರು ಪಾರ್ಕಿಂಗ್ ಅಕ್ಕಪಕ್ಕದ ಮನೆಯವರ ಮುಂದೆ ಮಾಡಿ ನೀಡುತ್ತಿರುವ ತೊಂದರೆಯನ್ನು ತ್ವರಿತವಾಗಿ ಸರಿಪಡಿಸಲು ಸೂಕ್ತ ಕ್ರಮ ಜರುಗಿಸಬೇಕಾಗಿ ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ

ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

12. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ <u>ಒಂದು ತಿಂಗಳೊಳಗಾಗಿ</u> ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

[ನ್ಯಾಯಮೂರ್ತಿ ಎನ್. ಆನಂದ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.